ದಾಟುವ ಧಾವಂತದಲ್ಲಿದ್ದಾಗಲೇ ರಸ್ತೆಯ ಇನ್ನೊಂದು ಬದಿಯಿಂದ ಪೇರಲೆಹಣ್ಣಿನ ದೊಡ್ಡದಾದ ಬುಟ್ಟಿಯೊಂದನ್ನು ಹೊತ್ತು ಇತ್ತ ಕಡೆ ಬರುತ್ತಿದ್ದ ಚಿನ್ನುಸ್ವಾಮಿಗೆ ಬೈಕ್‌ನವನೊಬ್ಬ ಡಿಕ್ಕಿ ಹೊಡೆದ. ಚಿನ್ನುಸ್ವಾಮಿ ಕೆಳಕ್ಕೆ ಬಿದ್ದು ಬಿಟ್ಟ. ನೋವು, ಸಂಕಟ, ಅಸಹಾಯಕತೆಯಿಂದ ಮುಲುಗುಡುತ್ತಿದ್ದ. ರಸ್ತೆಯ ತುಂಬೆಲ್ಲ ಹರಡಿ ಚೆಲ್ಲಾಪಿಲ್ಲಿಯಾದ, ಇನ್ನು ಕೆಲವು ಅಪ್ಪಚ್ಚಿಯಾದ ಹಣ್ಣುಗಳು. ಕ್ಷಣಕಾಲ ಟ್ರಾಫಿಕ್ ಸ್ತಬ್ಧ. ಬೈಕಿನವ ಪರಾರಿಯಾಗಿದ್ದ. ಘಟನೆ ಕೆಲವರ ಮೊಬೈಲಿನಲ್ಲಿ ರೆಕಾರ್ಡ್ ಆಯಿತು. ಮುಂದೆ ಅದು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತದೆ. ಅಷ್ಟರಲ್ಲಿ ಮಧ್ಯವಯಸ್ಸಿನ, ಕುಳ್ಳಗಿನ, ಕುರುಚಲು ಗಡ್ಡದ ವ್ಯಕ್ತಿಯೋರ್ವ ಅಲ್ಲಿ ಎಂಟ್ರಿ ಕೊಟ್ಟ. ಬರ್ಮುಡಾ, ಕೆಂಪು ಟೀ ಶರ್ಟ್, ಕಣ್ಣಿಗೊಂದು ಕನ್ನಡಕ. ಆತ ಕೆಳಗೆ ಬಿದ್ದ ಹಣ್ಣುಗಳನ್ನೆಲ್ಲ ಸರಸರನೆ ಹೆಕ್ಕಿ ಬುಟ್ಟಿಯಲ್ಲಿ ತುಂಬಿಸಿದ. ಆಚೀಚೆ ನಿಂತ ಒಬ್ಬಿಬ್ಬರು ಸಹಾಯ ಹಸ್ತ ನೀಡಿದರು. ಚಿನ್ನಸ್ವಾಮಿಯ ಕಂಗಳಲ್ಲಿ ಕೃತಜ್ಞತೆಯ ಕೋಡಿ. 'ಕೇಜಿಗೆ ಎಷ್ಟಪ್ಪ?' ಆ ವ್ಯಕ್ತಿ ಕೇಳಿದ. 'ಎಂಬತ್ತು ರೂ. ಸ್ವಾಮಿ'. 'ಐದು ಕೇಜಿ ಕೊಡು' ಅಂದ. ಸ್ವಾಮಿ ಹಣ್ಣುಗಳನ್ನು ತಕ್ಕಡಿಯಲ್ಲಿ ತೂಗಿ ಪ್ಯಾಕ್ ಮಾಡಿ ಕೊಟ್ಟ. ವ್ಯಕ್ತಿ ಜೇಬಿನಿಂದ ಐದು ನೂರರ ನೋಟೊಂದನ್ನು ತೆಗೆದು ಹಣ್ಣಿನವನ ಕೈಗಿತ್ತು, ಅವನ ಭುಜವನ್ನು ಹಿತವಾಗಿ ಅಮುಕಿ ಹೊರಡಲನುವಾದ. 'ಸಾರ್, ಚೆಲ್ರೆ' ಅಂತಂದ್ರೂ 'ಇರ್ಲಿ ಬಿಡು' ಅಂತ ಸನ್ನೆ ಮಾಡಿ ಮುಗುಳ್ನಕ್ಕು ಅನತಿ ದೂರದಲ್ಲಿ ನಿಲ್ಲಿಸಿದ್ದ ತನ್ನ ಬಿ.ಎಂ.ಡಬ್ಲ್ಯೂ ಕಾರನ್ನೇರಿದ. ನಾವೆಲ್ಲ ನೋಡನೋಡುತ್ತಿದ್ದಂತೆಯೇ ಹೊರಮಾವು ತಿರುವಿನಲ್ಲಿ ಅವನ ಕಾರು ಮರೆಯಾಗಿ ಹೋಯಿತು.

ಅದೇ ದಿನ ಸಂಜೆ ಜಯನಗರ ನಾಲ್ಕನೇ ಬ್ಲಾಕಿನ ಅಶೋಕ ಪಿಲ್ಲರ್ ಬಳಿಯ ಛತ್ರವೊಂದರಲ್ಲಿ ನನ್ನ ಮಡದಿಯ ಅಕ್ಕನ ಮಗಳ ಮದುವೆಯ ಆರತಕ್ಷತೆಗೆ ಹೋಗಲಿಕ್ಕಿತ್ತು. ಅದಕ್ಕೆ ನನ್ನವಳು ಬೆಳಗಿನಿಂದಲೇ ಸಖತ್ ತಯಾರಿ ನಡೆಸಿದ್ದಳು. ನನ್ನ, ಮಕ್ಕಳಿಬ್ಬರ ವಿಶೇಷ ಸಮಾರಂಭಗಳ ಡ್ರೆಸ್‌ಗಳ ಆಯ್ಕೆ ಯಾವಾಗಲೂ ಅವಳದೇ, ಬ್ಯಾಂಕ್ ಮ್ಯಾನೇಜರ್ ಪತ್ನಿಯೆಂದರೆ ಸಾಮಾನ್ಯವೇ? ಆರತಕ್ಷತೆಯ ಸಮಯ ಸಂಜೆ ಏಳು ಗಂಟೆಗೆ ಅಂದಿದ್ದರೂ ನಾವು ಅಲ್ಲಿ ಎಂಟ್ರಿ ಕೊಡುವುದು ಸುಮಾರು ಏಳೂಮುಕ್ಕಾಲು—ಎಂಟು ಗಂಟೆಯ ನಂತರವೇ. ಕಾರಣ, ಅದಾಗಲೇ ಅಲ್ಲಿ ಬಂದು ಜಮಾಯಿಸಿದ ಬಂಧು—ಮಿತ್ರರು ನಮ್ಮನ್ನು ಸ್ವಾಗತಿಸಿ, ಗೌರವಿಸಿದಾಗಲೇ ನಮ್ಮಲ್ಲಿ ಸಮಾರಂಭಕ್ಕೆ ಹೋದ ಸಾರ್ಥಕ ಭಾವ ಒಡಮೂಡುವುದು! ಇದು ನನ್ನವಳ ಖಾಸಾ ಅಭಿಪ್ರಾಯ. ಕಾರಿನಿಂದಿಳಿದು ಛತ್ರದ ಮಹಾದ್ವಾರದ ಬಳಿ ಮುಗುಳ್ನಗುತ್ತ ನಿಂತಿದ್ದ ಸಾಲಂಕೃತ ಸುವಾಸಿನಿಯರಿಂದ ಸುಗಂಧ ಭರಿತ ಪುಷ್ಪವನ್ನೂ, ಪನ್ನೀರ ಸಿಂಚನವನ್ನೂ, ತಂಪಾದ ಪಾನೀಯವನ್ನೂ ಸ್ವೀಕರಿಸಿ ಒಳಗೆ ಕಾಲಿಡುವಷ್ಟರಲ್ಲಿ 'ಸುಮಧುರ ಸಂಗೀತ ಸಂಜೆ'ಯ ಬಳಗದಿಂದ ನಿತ್ಯೋತ್ಸವದ ಕವಿ ನಿಸಾರ್‌ರ ಜನಪ್ರಿಯ ಹಾಡು 'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಮಧುರವಾಗಿ ತೇಲಿ ತೇಲಿ ಬರುತ್ತಿತ್ತು. ಕತ್ತೆತ್ತಿ ನೋಡಿದೆ – ಅರೆ, ಅವರೇ, ಬೆಳಿಗ್ಗೆ ಪೇರಲೆ ಹಣ್ಣನ್ನು ಹೆಕ್ಕಿಕೊಟ್ಟ ಮಹಾಶಯರ ಶ್ರೀಕಂಠದಿಂದಲೇ ಈ ಹಾಡು! ಅಷ್ಟರಲ್ಲಿ ನನ್ನ ಮಡದಿಯ ಭಾವ ಸೀತಣ್ಣ ಬಂದು ನಮ್ಮನ್ನೆಲ್ಲ ಸ್ವಾಗತಿಸುತ್ತಿದ್ದಾಗಲೂ ನನ್ನ ಗಮನ ಗಾಯಕರ ಮೇಲೆ ಇದ್ದುದನ್ನು ಕಂಡ ಆತ, 'ಅವರು ಇಂದ್ರಕುಮಾರ್ ಅಂತ, ನನ್ನ ಚಿಕ್ಕಪ್ಪನ ಎರಡನೇ ಮಗ, ವಿಚಿತ್ರ ಮನುಷ್ಯ, ಆಮೇಲೆ ನಿಮಗೆ ಅವರ ಭೇಟಿ ಮಾಡಿಸ್ತೇನೆ, ಆಯ್ತಾ?' ಅಂತ ಹೇಳಿ ಗುಂಪಿನಲ್ಲಿ ಮರೆಯಾದರು. ನನಗೆ ಯಾಕೋ ಇಂದ್ರಕುಮಾರ್ ಬಗ್ಗೆ ಅಸಹಜ ಕುತೂಹಲವೊಂದು ಗರಿಗೆದರಿ ನಿಂತಿತು. ತದನಂತರ ನಾವೆಲ್ಲ ವೇದಿಕೆಯನ್ನೇರಿ ವಧೂವರರಿಗೆ ಉಡುಗೊರೆಯನ್ನು ಓದಿಸಿ, ಬಾಯಿತುಂಬ ಶುಭ ಹಾರೈಸಿ ಊಟಕ್ಕೆಂದು ಡೈನಿಂಗ್ ಹಾಲ್‌ನ್ನು ಪ್ರವೇಶಿಸಿದೆವು. ಬಫೆ ಸಿಸ್ಟಮ್—